**ಇಂದು ದಿಃ05.10.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ. ಎಸ್.ಜಿ.ಡಿ. ವಕೀಲರಿಂದಃ**

ನಾಗಶೆಟ್ಟಿ ಬಿನ್ ಲೇಟ್ ದಾಸಶೆಟ್ಟಿ ಎಂದರೆ ನಾನೇ. ನನ್ನ ಆಧಾರ್ ಕಾರ್ಡ್ ಪ್ರಕಾರ 1971 ರಲ್ಲಿ ಹುಟ್ಟಿದ್ದೇನೆ ಎಂದರೆ ಸರಿ. ಈಗ ನನಗೆ 50 ವರ್ಷ ಆಗಿದೆ. ಅಪಘಾತದ ಕಾಲಕ್ಕೆ ನನಗೆ 51 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಮಂಜುಶೆಟ್ಟಿ ಮತ್ತು ನಾನು ಸ್ನೇಹಿತರು.ಅಪಘಾತವಾದ ದಿನಾಂಕ ನೆನಪಿಲ್ಲ. ಅಪಘಾತ ಆದ ಕೂಡಲೇ ಪಿರಿಯಾಪಟ್ಟಣದ ಸರ್ಕಾರಿ ಆಸ್ಪತ್ರೆ ನಂತರ ಮೈಸೂರಿನ ಭಾನವಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಅಪಘಾತ ಹೇಗೆ ಆಗಿದೆ ಎಂದು ನಾನು ವೈದ್ಯರಿಗೆ ಹೇಳಿದ್ದೇನೆ ಮತ್ತು ಅದನ್ನು ಬರೆದುಕೊಂಡಿದ್ದಾರೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಮಂಜುಶೆಟ್ಟಿ ಮತ್ತು ನಾನು ಮೋಟಾರ್ ಬೈಕ್ ನಲ್ಲಿ ಹೋಗುತ್ತಿದ್ದುದ್ದಾಗಿ ಬರೆದಿದೆ ಎಂದರೆ ಸರಿ. ಪೊಲೀಸ್ ಕೊಟ್ಟಿರುವ ರವಿ ನನ್ನ ಸ್ನೇಹಿತ. ದೂರಿನ ಪ್ರಕಾರ ನಾನು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಅಪಘಾತ ಆಗಿರುವುದಾಗಿ ಬರೆಯಲಾಗಿದೆ ಎಂದರೆ ಸರಿ.

ಚಾರ್ಜ್ ಶೀಟ್ ಪ್ರಕಾರ ಮಂಜುಶೆಟ್ಟಿ ಬೈಕಿನಲ್ಲಿ ಹೋಗುತ್ತಿದ್ದ ನಾನು ನಡೆದುಕೊಂಡು ಹೋಗುತ್ತಿದ್ದುದ್ದಾಗಿ ನಮೂದಿಸಲಾಗಿದೆ ಎಂದರೆ ಸರಿ. ಬೈಕ್ ನಲ್ಲಿ ನಾನು ಮತ್ತು ಮಂಜುಶೆಟ್ಟಿ ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎಂದರೆ ಸರಿ. ಮಂಜುಶೆಟ್ಟಿಗೆ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಗೊತ್ತಿಲ್ಲ. ಅಪಘಾತವಾದ 1 ದಿವಸ ತಡವಾಗಿ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದೇನೆ ಎಂದರೆ ಗೊತ್ತಿಲ್ಲ. ಮಂಜುಶೆಟ್ಟಿ ಮತ್ತು ನಾನು ಹೋಗುತ್ತಿದ್ದ ಬೈಕ್ ನಂಬರ್ ನನಗೆ ಗೊತ್ತಿಲ್ಲ ಮತ್ತು ಅದಕ್ಕೆ ವಿಮೆ ಇದ್ದುದು ನನಗೆ ಗೊತ್ತಿಲ್ಲ. ನಾನು ಮತ್ತು ಮಂಜುಶೆಟ್ಟಿ ವಿಮೆ ಇಲ್ಲದ ಬೈಕ್ ನಲ್ಲಿ ಹೋಗುತ್ತಿದ್ದಾಗ ಸ್ಕಿಡ್ ಆಗಿ ಬಿದ್ದು ಒಂದು ದಿವಸದ ನಂತರ ವಿಮೆ ಇರುವ ವಾಹನದ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ

ನನಗೆ ಗೊತ್ತಿಲ್ಲ. ನಾನು ಪಿರಿಯಾಪಟ್ಟಣದ ಆಸ್ಪತ್ರೆಯಲ್ಲಿ ಒಂದು ದಿನ ಮಾತ್ರ ಇದ್ದೆ. ಭಾನವಿ ಆಸ್ಪತ್ರೆಗೆ ಹೋಗಿರುವ ದಿನಾಂಕ ಗೊತ್ತಿಲ್ಲ. ಡಿಸ್ಚಾರ್ಜ್ ಸಮರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಭಾನವಿ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದಿಲ್ಲ ಆದ್ದರಿಂದ ಡಿಸ್ಚಾರ್ಜ್ ಸಮರಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಹಣ ಕೊಟ್ಟು ಮೆಡಿಕಲ್ ಬಿಲ್ಲುಗಳನ್ನು ಬರೆಸಿಕೊಂಡು ಬಂದಿದ್ದೇನೆ ಎಂದರೆ ಸುಳ್ಳು. ನನ್ನ ಆದಾಯ ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನನಗೆ ಏನು ಏಟಾಗಿತ್ತು ಎಂದು ಬರೆಸಿಲ್ಲ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ಎಷ್ಟು ದಿವಸ ದಾಖಲಾಗಿದ್ದೆ ಮತ್ತು ನನಗೆ ಯಾರು ಚಿಕಿತ್ಸೆ ನೀಡಿದ್ದಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ಅಪಾದಿತ ವಾಹನದ ಚಾಲಕನಿಗೆ ಪರವಾನಗಿ ಇಲ್ಲದ ಕಾರಣ 3 ನೇ ಎದುರುದಾರರು ನನಗೆ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಗೊತ್ತಿಲ್ಲ. ನನಗೆ ಆಗಿದ್ದ ಗಾಯಗಳೆಲ್ಲ ವಾಸಿಯಾಗಿವೆ ಮತ್ತು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸುಳ್ಳು. ಪರಿಹಾರ ಪಡೆಯಲು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**